ಶ್ರೀ ಎಂ. ಪಿ. ಪ್ರಕಾಶ್.—ಈ ಸಲಹೆ ಯೋಗ್ಯವಾಗಿದೆ. ಆದರೆ ಇಂಥ ಡೋನ್ ನದಿಯ ಸುತ್ತಮುತ್ತಲ ಪ್ರದೇಶದಲ್ಲಿ ಸಮಗ್ರ ಅಭಿವೃದ್ಧಿಗೆ ೧೫ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಬೇಕಾಗುತ್ತದೆ. ೧೮ ಕೋಟಿ ರೂಪಾಯಿ ಯೋಜನೆಯನ್ನು ಈಗ ಕೇಂದ್ರ ಸರ್ಕಾರದ ಮುಂದಿಟ್ಟಿದ್ದೇವೆ. ಅದನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತರತಕ್ಕ ಪ್ರಯತ್ನ ಮಾಡುತ್ತೇವೆ. ರೈತರಿಗೆ ಸಾಲದ ಹೊರೆ ಹೇರಿ ಮಾಡತಕ್ಕದ್ದು ಸಮಂಜಸವೇ ಎಂದು ಚರ್ಚಿಸಬೇಕಾಗಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ಯೋಚನೆ ಮಾಡುವುದಾದರೆ ಯೋಜನೆಯನ್ನು ಕಳುಹಿಸಿಕೊಡುತ್ತೇನೆ. ರೈತರ ಮೇಲೆ ಸಾಲದ ಹೊರೆ ಹೇರುವುದನ್ನು ಪರಿಶೀಲಿಸಬೇಕಾಗುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳು.

೧೪೦೭ ಶ್ರೀ ಎಸ್. ಜಿ. ನಂಜಯ್ಯನಮಠ್ (ಗಂಳೇದಗುಡ್ಡ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಒಟ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಎಷ್ಟು ಹಾಗೂ ಒಟ್ಟು ಪ್ರಾಥಮಿಕ ಶಾಲೆಗಳು ಎಷ್ಟು.

ಆ) ಖಾಲಿ ಇರುವಂತಹ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಒಟ್ಟು ಪ್ರಾಥಮಿಕ ಶಾಲೆಗಳು	...	೧೯೬೧
ಒಟ್ಟು ಪ್ರಾಥಮಿಕ ಶಾಲಾ ಶಿಕ್ಷಕರು	...	೭೨೯೪

ಆ) ದಿನಾಂಕ ೧೦-೪-೧೯೮೫ರ ಮುಂಚೆ ಸೇವೆಯಲ್ಲಿದ್ದು ಬಿಡುಗಡೆ ಹೊಂದಿರುವ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ ಅಭ್ಯರ್ಥಿಗಳ ನೇಮಕಾತಿಯಿಂದ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಜೆ ಎಸ್. ನಂಜಯ್ಯನಮಠ್.—ನಮ್ಮ ಡಿಡಿಪಿಐ. ಯವರು ೫೪೦ ಶಿಕ್ಷಕರ ಹುದ್ದೆಗಳನ್ನು ಕೊಡಿ ಎಂದು ಬರೆದು ಸುಮಾರು ಒಂದು ವರ್ಷವಾಯಿತು ನೂರು ವಿದ್ಯಾರ್ಥಿಗಳ ನಡುವೆ ಇಬ್ಬರೇ ಶಿಕ್ಷಕರು ಇರುವ ಪರಿಸ್ಥಿತಿ ಬಂದಿದೆ. ಕಳೆದ ಒಂದೆರಡು ವರ್ಷಗಳಿಂದ ಹೆಚ್ಚಿನ ಹುದ್ದೆಗಳನ್ನು ಕೊಡಿ ಎಂದು ಕೇಳಿದರೂ ಸರ್ಕಾರ ಗಮನಿಸುತ್ತಿಲ್ಲ. ಆ ಹುದ್ದೆಗಳನ್ನು ಯಾವಾಗ ಕೊಡುತ್ತೀರಿ? ಅದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ ನೇಮಿಸುತ್ತೀರಾ? ಕಾಂಟ್ರಾಕ್ಟ್ ಶಿಕ್ಷಕರನ್ನು ಏನು ಮಾಡುತ್ತೀರಿ? ಶಿಕ್ಷಕರು ಕಡಿಮೆ ಇರುವ ಕಡೆ ಏನು ಮಾಡುತ್ತೀರಿ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರು ಎರಡು ವರ್ಷಗಳಿಂದ ಕೇಳುತ್ತಿದ್ದೇವೆಂದು ಹೇಳಿದ್ದಾರೆ. ೬ ತಿಂಗಳಿನಿಂದ ಈಚೆಗೆ ಡಿ.ಎಲ್.ಆರ್ ಸಿ ನೇಮಿಸಿದ್ದೇವೆ. ಅವರು ಎಲ್ಲಾ ಕಡೆಗೂ ಸಮಗ್ರವಾಗಿ ಶಿಕ್ಷಕರನ್ನು ಆಯ್ಕೆ ಮಾಡಿ ನೇಮಿಸುತ್ತಾರೆ. ಶಿಕ್ಷಕರು ಕಡಿಮೆಯಾಗಿರುವ ಕಡೆಗಳಿಗೆ ಗುತ್ತಿಗೆ ಆಧಾರದ ಮೇಲೆ ೮-೧೦ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ. ಅದಕ್ಕೆ ಈಗಾಗಲೇ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಜಿ. ಎಸ್. ನಂಜಯ್ಯ ಮಠ್.—ಖಾಲಿ ಇರುವ ಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ವಿಚಾರ ಬೇರೆ. ಆದರೆ ಒಂದು ಶಾಲೆಯಲ್ಲಿ ೬ ಶಿಕ್ಷಕರಿರುತ್ತಾರೆ. ೮ ಶಿಕ್ಷಕರು ಬೇಕು ಎಂದು ಕೇಳಿರುತ್ತಾರೆ. ಅಂಥದ್ದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ ? ೧೫೦ ಹುಡುಗರ ಮಧ್ಯೆ ೩ ಜನ ಶಿಕ್ಷಕರಿದ್ದಾರೆ. ಅಲ್ಲಿ ಏನು ವ್ಯವಸ್ಥೆ ಮಾಡುತ್ತಿದ್ದಾರೆ ? ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ ನೇಮಕಾತಿ ಮಾಡಿಕೊಳ್ಳುತ್ತಾರೆಯೇ ?

ಶ್ರೀ ಹೆಚ್ ಜಿ. ಗೋವಿಂದೇಗೌಡ.—ಸದ್ಯಕ್ಕೆ ಆ ಆಲೋಚನೆ ಇಲ್ಲ. ಡಿ. ಎಲ್. ಆರ್. ಸಿ. ಮುಖಾಂತರ ೨೦ ಸಾವಿರಕ್ಕಿಂತಲೂ ಹೆಚ್ಚು ಉಪಾಧ್ಯಾಯರನ್ನು ನೇಮಕ ಮಾಡಿ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ೨೮೦೦ ಶಿಕ್ಷಕರನ್ನು ಗುತ್ತಿಗೆ ಆಧಾರದಮೇಲೆ ತೆಗೆದುಕೊಳ್ಳುತ್ತಿದ್ದು ಕೆಲವು ಕಡೆ ಉಪನಿರ್ದೇಶಕರು ತೆಗೆದುಕೊಂಡಿದ್ದಾರೆ. ಒಂದೆರಡು ಕಡೆ ತೆಗೆದುಕೊಂಡಿಲ್ಲ. ಸ್ಯಾಂಕ್ಷನ್ ಆಗಿರುವ

ಪೋಸ್ಟ್ ಎಲ್ಲಾ ಭರ್ತಿಯಾಗಿದೆ. ಇನ್ನೂ ಆಗಬೇಕಾದ್ದು ತುಂಬಾ ಇದೆ. ೧.೨೦ ಲಕ್ಷ ವಿದ್ಯಾರ್ಥಿಗಳ ಹೊಸದಾಗಿ ಸೇರಿದ್ದಾರೆ. ಹೊಸದಾಗಿ ಸ್ಯಾಂಕ್ಷನ್ ಆದ ಹುದ್ದೆಗಳಿಗೆ ಮಂಜೂರಾತಿಯಾದಮೇಲೆ ಕೂಡಲೇ ತೆಗೆದುಕೊಳ್ಳುವುದಕ್ಕೆ ಮುಂದೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜೆ. ಎಸ್. ನಂಜಯ್ಯಮಾರ್ —ನಾವು ಎಲ್ಲಿ ಹೋದರೂ ಶಿಕ್ಷಕರಿಲ್ಲ ಎಂಬ ಕೂಗನ್ನು ಕೇಳುತ್ತಿದ್ದೇವೆ. ಈ ಸ್ಯಾಂಕ್ಷನ್ ಆಗಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ?

ಅಧ್ಯಕ್ಷರು.—ಅದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ಯಾಂಕ್ಷನ್ಡ್ ಪೋಸ್ಟ್ ಕಂಪ್ಲೀಟಾಗಿ ಭರ್ತಿ ಮಾಡುತ್ತೇವೆ. ಒಂದೂ ಖಾಲಿ ಬಿಡುವುದಿಲ್ಲ. ಈಗ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಪ್ರಕಾರ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಹಣಕಾಸಿನ ಪರಿಸ್ಥಿತಿಯನ್ನು ಕೂಡ ನಾವು ಯೋಚನೆ ಮಾಡಬೇಕು. ಮಾನ್ಯ ಸದಸ್ಯರು ಹೇಳುವ ಮಾತಿನಲ್ಲಿ ನಿಜಾಂಶ ಇದೆ.

ಶ್ರೀ ಜೆ. ಎಸ್. ನಂಜಯ್ಯಮಾರ್.—ಸ್ಯಾಂಕ್ಷನ್ಡ್ ಪೋಸ್ಟ್‌ಗೆ ಹಣ ಏತಕ್ಕೆಲ್ಲ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಂಪಲ್ಸರಿ ಎಜುಕೇಷನ್ ಆಕ್ಟ್ ಇದ್ದಕಾರಣ ಕಂಪಲ್ಸರಿ ಎಜುಕೇಷನ್ ಮಾಡಿದ್ದೀರಿ. ಪ್ಲಾನ್‌ನಲ್ಲಿ ಎಷ್ಟು ಸ್ಯಾಂಕ್ಷನ್ಡ್ ಸ್ಟೆ್ರಂತ್ ಇರುತ್ತದೋ ಅಷ್ಟು ಟೀಚರ್ಸ್ ರೆಕ್ರೂಟ್ ಮಾಡಲೇಬೇಕು. ಕೆಲವು ಸಾರಿ ಸ್ಟೆ್ರಂತ್ ಜಾಸ್ತಿಯಾದಾಗ ನಾನ್-ಪ್ಲಾನ್‌ನಲ್ಲೂ ಟೀಚರ್ಸ್‌ಪೋಸ್ಟ್ ಕ್ರಿಯೇಟ್ ಮಾಡಬೇಕಾಗುತ್ತದೆ. ಜೂನ್‌ನಲ್ಲಿ ಶಾಲೆ ಪ್ರಾರಂಭ ಮಾಡಬೇಕೆಂದರೆ ರೆಕ್ರೂಟ್‌ಮೆಂಟ್ ಪೂರ್ತಿ ಮೇ ತಿಂಗಳಲ್ಲೇ ಮಾಡಬೇಕಾಗುತ್ತದೆ. ಮೇ ತಿಂಗಳಲ್ಲಿ ತಾವು ಏತಕ್ಕೆ ಮಾಡಲಿಲ್ಲ ? ಪದೇಪದೇ ಈ ವಿಷಯ ಬರುತ್ತಿದೆ. ಪ್ರತಿಪರ್ಷ ಎಲ್ಲ ಸದಸ್ಯರೂ ಆಪರವರ ಕ್ಷೇತ್ರದಲ್ಲಿ ಶಿಕ್ಷಕರು ಬೇಕು ಎಂದು ಹೇಳುತ್ತಿದ್ದಾರೆ. ಒಂದು ವರ್ಷದ ಹಿಂದೆಯೂ ಈ ಪ್ರಶ್ನೆ ಬಂದಾಗ ಇದೇರೀತಿ ಉತ್ತರ ಹೇಳಿದ್ದೀರಿ. ಪ್ಲಾನ್ಡ್ ಪೋಸ್ಟನ್ನು ಸ್ಯಾಂಕ್ಷನ್ ಮಾಡಿಕೊಂಡು ಭರ್ತಿ ಮಾಡುವುದು ಒಂದು ಕಡೆಯಾದರೆ ಇನ್ನೊಂದು ಕಡೆ ನಾನ್-ಪ್ಲಾನ್‌ನಲ್ಲಿ ಸ್ಯಾಂಕ್ಷನ್ ತೆಗೆದುಕೊಂಡು ಮಾಡಬೇಕಾಗುತ್ತದೆ. ಏಕೆಂದರೆ ಕಂಪಲ್ಸರಿ ಎಜುಕೇಷನ್ ಆಕ್ಟ್ ಜಾರಿಗೆ ತರಬೇಕಾದರೆ ಇದನ್ನು ಮಾಡಬೇಕಾಗುತ್ತದೆ. ಹಣ ಕೊರತೆ ಇದೆ ಎಂದರೆ ಬೇರೆ ಖರ್ಚುಗಳನ್ನು ಕಡಿಮೆ ಮಾಡಿ ಇದಕ್ಕೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಮತ್ತೆ ರಿಸರ್ವೇಷನ್ ಕೋಟಾದಲ್ಲಿ ಕಡಿಮೆ ಇದೆ. ಅದಕ್ಕೆ ೨೫ ಪರ್ಸೆಂಟ್ ಮಾಡಿದ್ದೇವೆಂದು ಹಿಂದೆ ಹೇಳಿದ್ದರಿ. ಅದನ್ನು ಫಾಲೊ ಮಾಡಿದ್ದಾರೋ ಹೇಗೆ ಎಂಬುದನ್ನೂ ಸವಿಸ್ತಾರವಾಗಿ ಹೇಳಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ರಿಸರ್ವೇಷನ್ ಕೋಟಾ ೨೫ ಪರ್ಸೆಂಟನ್ನು ಭರ್ತಿ ಮಾಡಿದ್ದೇವೆ. ಪ್ಲಾನ್ಡ್ ಸ್ಕೀಮಿನಲ್ಲಿ ೧೯ ಸಾವಿರಕ್ಕೂ ಹೆಚ್ಚು ಉಪಾಧ್ಯಾಯರನ್ನು ಡಿ. ಎಲ್. ಆರ್. ಸಿ. ಮುಖಾಂತರ ನೇಮಕ ಮಾಡಿದ್ದೇವೆ. ೩ ಸಾವಿರದವರೆಗೆ ಗತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಎಲ್ಲಾ ಕಡೆ ಇದು ಆಗಿದೆ. ಒಂದೆರಡು ಕಡೆ ಆಗದಿದ್ದರೆ ೧೫ ದಿವಸದ ಒಳಗಾಗಿ ಎಲ್ಲರನ್ನೂ ಗುತ್ತಿಗೆ ಆಧಾರದಮೇಲೆ ನೇಮಕ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಖಾಸಗಿ ಶಾಲೆಗಳಲ್ಲಿ ಏನಾದರೂ ಮಕ್ಕಳ ಸಂಖ್ಯೆ ಜಾಸ್ತಿಯಾದರೆ ತಕ್ಷಣ ಪೋಸ್ಟ್ ಕೂಡ ಸ್ಯಾಂಕ್ಷನ್ ಆಗುತ್ತದೆ. ಫಿಲಪ್ ಆಗುತ್ತದೆ. ಸ್ಯಾಂಕ್ಷನ್ಡ್ ಪೋಸ್ಟ್‌ಗಳನ್ನು ತಾವು ಫಿಲಪ್ ಮಾಡಿದ್ದೀರಿ. ಆದರೆ ಅದನ್ನು ಯಾವಾಗ ನಿಷ್ಕರ್ಷೆ ಮಾಡಿದ್ದೀರಿ ? ಐದಾರು ವರ್ಷಗಳ ಹಿಂದೆ ಅದನ್ನು ನಿಷ್ಕರ್ಷೆ ಮಾಡಿರಬಹುದು. ಆದರೆ ಅಲ್ಲಿಂದೀಚೆಗೆ ಎಷ್ಟು ಹುದ್ದೆಗಳು ಬೇಕಾಗುತ್ತವೆ ಎಂಬುದರ ಬಗ್ಗೆ ಸಮೀಕ್ಷೆ ಮಾಡಿದ್ದೀರಾ ? ಮಾಡಿದ್ದರೆ ಅಷ್ಟು ಗಳನ್ನು ತುಂಬುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇದು ಸರ್ಕಾರಿ ವಲಯಕ್ಕೆ ಆಯಿತು. ಆದರೆ ಖಾಸಗಿ ವಲಯದಲ್ಲಿ ಎಷ್ಟು ಹುದ್ದೆಗಳು ಸ್ಯಾಂಕ್ಷನ್ ಆಗಿವೆ ? ಅದರಲ್ಲಿ ಎಷ್ಟು ತುಂಬಿದ್ದೀರಿ ? ಎಷ್ಟು ತುಂಬಬೇಕು ಎಂಬುದನ್ನು ಸವಿವರವಾಗಿ ಹೇಳುತ್ತೀರಾ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಆ ಇನ್‌ಫರ್ಮೇಷನ್ ಬೇಕಾದರೆ ಕೊಡುತ್ತೇನೆ. ಪೋಸ್ಟ್ ಸ್ಯಾಂಕ್ಷನ್ ಆಗಬೇಕಾದ್ದು ತುಂಬ ಇದೆ. ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಸ್ಪೆಷಲ್ ಡ್ರೈವ್ ಮಾಡಿದ್ದೇವೆ. ಬರುವ ಸಾಲಿನಲ್ಲಿ ಅಪ್ರೂವಲ್ ತೆಗೆದುಕೊಂಡು ಭರ್ತಿ ಮಾಡುತ್ತೇವೆ. ಖಾಸಗಿ

ವಲಯದಲ್ಲಿ ಎಷ್ಟು ಉಪಾಧ್ಯಾಯರು ಕೆಲಸ ಮಾಡುತ್ತಿದ್ದಾರೆ, ಎಷ್ಟು ಉಪಾಧ್ಯಾಯರು ಬೇಕು ಎಂದು ಕೇಳಿದ್ದಾರೆ. ನನಗೆ ಸ್ವಲ್ಪ ಕಾಲಾವಕಾಶ ಕೊಟ್ಟರೆ ವಿವರ ನೋಡಿ ಹೇಳುತ್ತೇನೆ.

ಶ್ರೀ ಜಿ. ಎಸ್. ನಂಜಯ್ಯಮಂತ್.—ಎಷ್ಟು ಶಿಕ್ಷಕರು ಬೇಕಾಗಿದ್ದಾರೆ ಎಂಬುದು ಡಿ.ಡಿ.ಪಿ.ಐ. ಅವರಿಂದ ತಮಗೆ ವರದಿ ಬಂದಿದೆ. ಅದು ಬಂದು ಬಹಳ ದಿವಸಗಳಾದವು. ಆದಕ್ಕೆ ಒಂದು ನಿರ್ದಿಷ್ಟ ಪಡಿಸಿದ ತಾರೀಖನ್ನು ಹಾಕಿಕೊಂಡು ಪೋಸ್ಟ್ ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ಯಾಂಕ್ಷನ್ಡ್ ಪೋಸ್ಟ್ ನಮಗೇನು ಕಳುಹಿಸಿದ್ದಾರೆ ಸಂಪೂರ್ಣವಾಗಿ ಅದನ್ನು ಅಪಾಯಿಂಟ್ ಮಾಡಿಕೊಳ್ಳಿ ಎಂದು ಆದೇಶ ಕೊಟ್ಟಿದ್ದೇವೆ. ಎರಡು ಮೂರು ವರ್ಷಗಳಿಂದ ಹೊಸದಾಗಿ ಹುದ್ದೆಗಳು ಏನು ಆಗಿಲ್ಲ ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ೫೦:೧ ಪ್ರಕಾರ ತೆಗೆದುಕೊಂಡರೆ ಹೆಚ್ಚು ಹುದ್ದೆಗಳು ಬೇಕಾಗಂತ್ತದೆ. ಇದನ್ನು ನೋಡಿ ಮುಂದಿನ ಸಾರಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಎಸ್. ನಂಜಯ್ಯಮಂತ್.—ನಾನು ಹೇಳುತ್ತಿರುವುದು...

ಅಧ್ಯಕ್ಷರು.—ಇದು ಆಧರ್ ಗಂಟೆ ಚರ್ಚೆ ಅಲ್ಲ. ಪ್ರಶ್ನೋತ್ತರ ವೇಳೆ.

ಶ್ರೀ ಜಿ. ಎಸ್. ನಂಜಯ್ಯಮಂತ್.—ಸ್ಯಾಂಕ್ಷನ್ ಆಗಿರುವ ಹುದ್ದೆಗಳನ್ನು ತುಂಬಿದ್ದಾರೆ. ಆದರೆ ಹೊಸದಾಗಿ ಪೋಸ್ಟ್‌ಗಳನ್ನು ಯಾವಾಗ ಸ್ಯಾಂಕ್ಷನ್ ಮಾಡುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ಯಾಂಕ್ಷನ್ಡ್ ಪೋಸ್ಟ್ ಭರ್ತಿ ಮಾಡಿದ್ದೇವೆ.

ಶ್ರೀ ಜಿ. ಎಸ್. ನಂಜಯ್ಯಮಂತ್.—ಸ್ಯಾಂಕ್ಷನ್‌ಗೆ ತಮಗೆ ಕಳುಹಿಸಿದ್ದಾರಲ್ಲಾ ಅದನ್ನು ಯಾವಾಗ ಕೊಡುತ್ತೀರಿ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಪೋಸ್ಟ್‌ಗೆ ಎಷ್ಟು ಬೇಕು ಎಂದು ಕೇಳುತ್ತಾರೋ ಅದಕ್ಕೆ ಸರ್ಕಾರದವರು ಸ್ಯಾಂಕ್ಷನ್ ತೆಗೆದುಕೊಂಡು ಭರ್ತಿ ಮಾಡುತ್ತೇವೆ. ಹೆಚ್ಚು ಕಡಿಮೆ ಜಾಗಕ್ಕೆ ಅಂದರೆ ಕರ್ನಾಟಕದಲ್ಲಿ ಎಷ್ಟು ಮಕ್ಕಳಿದ್ದಾರೆ, ಉಪಾಧ್ಯಾಯರು ಎಷ್ಟು ಜನರು ಬೇಕಾಗುತ್ತಾರೆ ಎಂಬುದನ್ನು ತರಿಸಿಕೊಂಡು ಮಾನ್ಯ ಸದಸ್ಯರು ಹೇಳಿದಂತೆ ೫೦ ಜನ ಮಕ್ಕಳಿಗೆ ಒಬ್ಬ ಉಪಾಧ್ಯಾಯರಂತೆ ನೇಮಕ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾಂಟ್ರಾಕ್ಟ್ ಆಧಾರದಮೇಲೆ ತೆಗೆದುಕೊಂಡಿರುವ ಉಪಾಧ್ಯಾಯರ ಬಗ್ಗೆ ಹೇಳಿದ್ದೀರಿ. ಅವರಲ್ಲಿ ಅನೇಕರನ್ನು ತೆಗೆದುಕೊಂಡಿದ್ದೇವೆ ಎಂದೂ ಹೇಳಿದ್ದೀರಿ. ಇನ್ನೂ ಅನೇಕ ಜನರು ಕೆಲಸವಿಲ್ಲದೆ ಉಳಿದುಕೊಳ್ಳುತ್ತಾರೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ ? ಎಷ್ಟು ಜನ ಉಳಿದುಕೊಳ್ಳುತ್ತಾರೆ ? ಅವರಿಗೆ ಏನು ಮಾಡುತ್ತೀರಿ ? ಜೊತೆಯಲ್ಲಿ ಲೋಕಲ್ ಕ್ಯಾಂಡಿಡೇಟ್ಸನ್ನು ಏನು ಮಾಡುತ್ತೀರಿ ? ಅವರನ್ನೇ ಖಾಯಂ ಮಾಡಿದರೆ ಸಂತೋಷ ಇನ್ನೂ ಕೆಲವರು ರೆಗ್ಯುಲರೈಸ್ ಆಗಿಲ್ಲ. ಅವರನ್ನು ರೆಗ್ಯುಲರೈಸ್ ಮಾಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—೫೦ ಪರ್ಸೆಂಟ್ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಈಗಾಗಲೇ ಪರ್ಮನೆಂಟ್ ಕೆಲಸ ಸಿಕ್ಕಿದೆ. ಉಳಿದವರನ್ನು ಕೆಲಸದಿಂದ ತೆಗೆದಿಲ್ಲ ; ಮುಂದುವರೆಯುತ್ತಿದ್ದಾರೆ. ಡಿ.ಎಲ್.ಆರ್.ಸಿ. ಮುಖಾಂತರ ನೇಮಕ ಮಾಡುವಾಗ ಅಥವಾ ರಾಜ್ಯಮಟ್ಟದ ಕಮಿಟಿಯಲ್ಲಿ ಮಾಡುವಾಗ ಪರಿಶೀಲನೆ ಮಾಡಿ ಅವರನ್ನು ಕನ್‌ಫರ್ಮ್ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ. ಗಾತ್ರಿಗೆ ಆಧಾರದ ಮೇಲೆ ೩ ಸಾವಿರ ಜನರನ್ನು ತೆಗೆದುಕೊಂಡಿದ್ದೇವೆ. ಮತ್ತೆ ಕೆಲವರು ಉಳಿದುಕೊಂಡಿದ್ದಾರೆ. ಮುಂದೆ ನೇಮಕ ಮಾಡಿಕೊಳ್ಳುವಾಗ ಅರ್ಹತೆ ಇದ್ದರೆ ಅವರನ್ನು ನೇಮಕ ಮಾಡಿಕೊಳ್ಳತಕ್ಕ ವ್ಯವಸ್ಥೆ ಮಾಡುತ್ತೇವೆ.